ಬೆಂಗಳೂರು ಡಿಸ್ಟ್ರಿಕ್ಟ್.

889

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜಿ ನಂಬರ್ 1029.

ಬೆಂಗಳೂರು ಕೋಟೆಯಲ್ಲಿ ವಾಸವಾಗಿಯಿದ್ದು ಮೃತಪಟ್ಟ ದಿವಾ ಕಛೇರಿ ಅಕೌಂಟ್ಯಾಂಟ್ ತಮ್ಮಂಣ ಸುಬ್ಬರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ತಮ್ಮಂಣ ರಾಮರಾವು ಮೃತಪಟ್ಟ ಸದರೀ ಸುಬ್ಬರಾಯರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ತಮ್ಮಂಣ ರಾಮರಾವು ಬೆಂಗಳೂರು ವಾಸಸ್ಥನಾಗಿ ಮೃತಪಟ್ಟ ತಮ್ಮಂಣ ಸುಬ್ಬರಾಯರ ಜಿಂದಗಿ. ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ತಮ್ಮಂಣ ರಾಮರಾಯರ ಅರ್ಜಿಯನ್ನು 1890ನೇ ಇಸವಿ ಜನವರೀ ತಿಂಗಳು ತಾರೀಖು 31ರ ಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಮ್ಮಂಣ ಸುಬ್ಬರಾಯರ ಆಸ್ತಿಗೆ ಹಕ್ಕುದಾರರಾದ ವಿಶ್ವರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1889ನೇ ಇಸವಿ ಡಿಸಂಬರ್ ತಿಂಗಳು 17ನೇ ತಾರೀಖಿನಲ್ಲಿ ಕೋರ್ಟು ವೊಪರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಲ್. ಅನಂತಸ್ವಾಮಿರಾವ್,
ಸಬ್ ಜಜ್ಜ.

ಬೆಂಗಳೂರು ಡಿವಿಜ್.

ಪ್ರಸಿದ್ಧ ಪತ್ರಿಕೆ.

ತಾರೀಖು 6ನೇ ಡಿಸಂಬರ್ 1889.

ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ತಿಳಿಯಪಡಿಸುವದೇನಂದರೆ,—ಬೆಂಗಳೂರಲ್ಲಿ ಹೊಸದಾಗಿ ತಯಾರಾಗತಕ್ಕ ರವಿನ್ಯೂ ಸರ್ವೆ ಆಫಿಸ್ ಕಾಮಗಾರಿ ಕಂಟ್ರಾಕ್ಟಿಗಾಗಿ ವೊಹರಾಗಿ ಬರುವ ದರಖಾಸ್ತುಗಳನ್ನು ಬೆಂಗಳೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಬರುವ ಜನವರಿ 6ನೇ ತಾರೀಖು ಪರಿಯಂತರ ಪಡಿಯಲ್ಪಡುವದು.

ಸುಮಾರು ಅಂದಾಜಿನ ಪರಿಮಾಣವನ್ನು ಈ ಕೆಳಗೆ ನಮೂದಿಸಿ ಯಿಧೆ, ಈ ಪರಿಮಾಣವು ಗೊತ್ತಾದ್ದಲ್ಲಾ, ಕಾಮಗಾರಿಯು 1891ನೇ ಇಸವಿ ಜೂನ್ ಆಖೈರಿಗೆ ಪೂರೈಸತಕ್ಕದ್ದು.

2. ಸ್ಯಾಂಕ್ಷನ್ ಅಂದಾಜು ಮತ್ತು ಪರತ್ತು ಇತರ ಸಂಗತಿಗಳನ್ನು ಸಹ ದಿವಿ 11 ಘಂಟೆ ಲಾಗಾಯತು ಸಾಯಂಕಾಲ 5 ಘಂಟೆ ವರಿಗೆ ಬೆಂಗಳೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ ಆಫಿಸಿನಲ್ಲಿ ನೋಡಬಹುದು.

3. ದರಖಾಸ್ತುಗಳು ಅಚ್ಚಿನ ನಮೂನೆಯಲ್ಲಿ ಯಿರಬೇಕು. ಈ ನಮೂನೆಯನ್ನು ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಪಡೆಯಬಹುದು. ಬಾಬುವಾರ್ ಕೆಲಸವನ್ನು ಯಾವ ಯಾವ ವರದಲ್ಲಿ ನಡಿಸಲ್ಪಡುವದೋ ಅದನ್ನು ತೋರಿಸಿ ಕೆಳಗೆ ಕೊಟ್ಟು ಯಿರುವ ಫಾರಮಿನಂತೆ ಬಂದು ಪಟ್ಟ ತಯಾರಿಯಿಂದ ದರಖಾಸ್ತಿನೊಡನೆ ಕಳುಹಿಸಿಕೊಡಬೇಕು.

4. ಪ್ರತಿ ದರಖಾಸ್ತುಗಳು ಪ್ರೊನೋಟ್ ಮೂಲಕವಾಗಲಿ ನಗದಾಗಲಿ 100 ರೂಪಾಯಿ ಡಿವಾಜಿಟನ್ನು ವಡಗೂಡಿ ಯಿರಬೇಕು. ಮತ್ತು ಬೆಂಗಳೂರಲ್ಲಿ ಹೊಸದಾಗಿ ತಯಾರಾಗುವ ರವಿನ್ಯೂ ಸರ್ವೆ ಆಫಿಸ್ ಕಾಮಗಾರಿ ದರಖಾಸ್ತುಯೆಂತ ಲಿಫಾಫೇ ಮೇಲೆ ಬರದುಯಿರಬೇಕು. ಹೀಗೆ ಯಿಲ್ಲದೆ ಬರುವ ದರಖಾಸ್ತುಗಳನ್ನ ತಿರಸ್ಕರಿಸಲ್ಪಡುವದು.

5. ದರಖಾಸ್ತುಗಳನ್ನ ಅಂಗೀಕರಿಸತಕ್ಕದ್ದು ಚೀಫ್ ಇಂಜನಿಯರ್ ಸಾಹೆಬರವರದಾಗಿ ಯಿಧೆ. ಅವರು ಕಮ್ಮಿ ದರ ವ ಇತರ ದರಖಾಸ್ತನ್ನು ಮಂಜೂರ್ಮಾಡುವದಕ್ಕೆ ವ ದರಖಾಸ್ತನ್ನು ಅನಂಗೀಕರಿಸುವದಕ್ಕೆ ಕಾರಣವನ್ನ ಹೇಳುವದಕ್ಕೆ ಬದ್ಧರಾಗಿ ಯಿರುವದಿಲ್ಲ.

6. ದರಖಾಸ್ತು ಮಂಜೂರ್ಮಾಡಿದ 8 ರೋಜುಗಳ ವಳಗಾಗಿ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟು ಬಾಂಡನ್ನ ಬರದುಕೊಡತಕ್ಕದ್ದು ಅವಶ್ಯವಾಗಿ ಯಿಧೆ. ಹೀಗೆ ಮಾಡದಿರುವ ಸಂದರ್ಭದಲ್ಲಿ ದರಖಾಸ್ತು ರದ್ದು ಆದಹಾಗೆ ಭಾವಿಸಲ್ಪಡುವದಲ್ಲದೆ ದರಖಾಸ್ತುದಾರನು ತನ್ನ ಡಿವಾಜಿಟ್ ವೊಬಲಗನ್ನ ಹೋಗಲಾಡಿಸಿ ಕೊಳ್ಳುವನು.